## ೮೬ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಹಾವೇರಿ

೨೦೨೩ರ ಜನವರಿ ೬ ಶುಕ್ರವಾರ, ೭ ಶನಿವಾರ ಹಾಗೂ ೮ ಭಾನುವಾರ

### ಪುಸ್ತಕ ಮಾರಾಟ ಮಳಿಗೆ ನೋಂದಣಿ

೧. ಪುಸ್ತಕ ಮಾರಾಟ ಮಳಿಗೆ ನೋಂದಣಿ ದಿನಾಂಕ ೧ ಡಿಸೆಂಬರ್ ೨೦೨೨ ರಿಂದ ೧೮ ಡಿಸೆಂಬರ್ ೨೦೨೨ ರವರೆಗೆ ಚಾಲ್ತಿಯಲ್ಲಿರುತ್ತದೆ.

೨. ಪ್ರತಿ ಮಳಿಗೆಯ ನೋಂದಣಿಯ ಶುಲ್ಕ ೩೦೦೦ (ಮೂರು ಸಾವಿರ) ರೂಪಾಯಿಗಳು

೩. ಮಳಿಗೆಗಳ ಹಂಚಿಕೆ, ಜಿಲ್ಲಾಡಳಿತ ಮತ್ತು ಕಸಾಪ ಪ್ರತಿನಿಧಿಗಳ ಸಮ್ಮುಖದಲ್ಲಿ ಲಾಟರಿ ಆಧಾರದ ಮೇಲೆ ವಿತರಿಸಲಾಗುವುದು ಮತ್ತು ಹಂಚಿಕೆಯ ದಾಖಲಾತಿ ಚಿತ್ರೀಕರಣ

ಮುಖಪುಟ ನೋಂದಣಿ

ಕಸಾಪ, ೮೬ನೆಯ ಅಖಿಲ ಭಾರತ ಕನ್ನಡ ಸಮ್ಮೇಳನ ೨೦೨೩ ©

೮೬ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಹಾವೇರಿ

೨೦೨೩ರ ಜನವರಿ ೬ ಶುಕ್ರವಾರ, ೭ ಶನಿವಾರ ಹಾಗೂ ೮ ಭಾನುವಾರ

ಮಾಡಲಾಗುವುದು.

೪. ಮಳಿಗೆಗಳ ಹಂಚಿಕೆ ಆಗದಿದ್ದರೆ ಅವರ ಹಣವನ್ನು ಸಮ್ಮೇಳನದ ನಂತರ ೬೦ ದಿವಸಗಳಲ್ಲಿ ಮರಳಿಸಲಾಗುವುದು.

೫. ಪುಸ್ತಕ ಮಳಿಗೆಗಳಲ್ಲಿ ಕಡ್ಡಾಯವಾಗಿ ಕನ್ನಡ ಪುಸ್ತಕ ಗಳನ್ನೇ ಮಾರಾಟ ಮಾಡಲು ಕೋರಲಾಗಿದೆ. ಬೇರೆ ಭಾಷೆಗಳ ಪುಸ್ತಕ ಮಾರಾಟ ಕಂಡು ಬಂದಲ್ಲಿ ಮಾರಾಟಕ್ಕೆ ನೀಡಲಾದ ಪರವಾನಗಿ ರದ್ದು ಪಡಿಸಲಾಗುವುದು.

**೭. ಪುಸ್ತಕ ಮಳಿಗೆ ಸೌಲಭ್ಯಗಳು**

- ಎರಡು ಟೇಬಲ್, ಎರಡು ಕುರ್ಚಿ
- ವಿದ್ಯುತ್ ವ್ಯವಸ್ಥೆ
- ನಾಲ್ವರಿಗೆ ಊಟದ ಕೂಪನ್ ಮತ್ತು ಬ್ಯಾಡ್ಜ್

ಮುಖಪುಟ ನೋಂದಣಿ

ಕಸಾಪ, ೮೬ನೆಯ ಅಖಿಲ ಭಾರತ ಕನ್ನಡ ಸಮ್ಮೇಳನ ೨೦೨೩ ©

ಸಂಖ್ಯೆ :2419677 / 2419361
0821-2419363/2419301

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ: 1916

ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್ ಭವನ, ಮೈಸೂರು

3.7.8
30/12/22

ವಿಷಯ: "86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ" ಹಣ ಮಂಜೂರು ಮಾಡುವ ಬಗ್ಗೆ.

ಉಲ್ಲೇಖ:1. ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು ಇವರ ಪತ್ರ ಸಂಖ್ಯೆ: ಪ್ರ(6/355/2022-23 ದಿನಾಂಕ: 06.12.2022.

2. ಮಾನ್ಯ ಕುಲಪತಿಗಳ ಆದೇಶ ದಿನಾಂಕ: 26.12.2022

******

**ಆದೇಶ ಸಂಖ್ಯೆ: ಜಿಎಲ್1/339/1994-95 ದಿನಾಂಕ: 28ನೇ ಡಿಸೆಂಬರ್ 2022**

ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ, ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು ಇವರಿಗೆ ದಿನಾಂಕ: 06.01.2023 ರಿಂದ 08.01.2023ರವರೆಗೆ ಹಾವೇರಿಯಲ್ಲಿ ನಡೆಯುವ "86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ" ಪ್ರಸಾರಾಂಗದ ವತಿಯಿಂದ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟ ಮಾಡಲು ಹಾಗೂ ಪುಸ್ತಕ ಸಾಗಣೆ ವೆಚ್ಚ, ಮಳಿಗೆಗಳ ಬಾಡಿಗೆ, ಇತರ ಲೇಖನ ಸಾಮಾಗ್ರಿಗಳ ಖರ್ಚು ವೆಚ್ಚಗಳಿಗೆ ರೂ.50,000/-(ಐವತ್ತು ಸಾವಿರ ರೂಪಾಯಿಗಳು ಮಾತ್ರ)ಗಳನ್ನು ಮುಂಗಡ ಹುಂಡಿಯ ಮುಖಾಂತರ ಪಡೆಯಲು ಮಂಜೂರಾತಿ ನೀಡಲಾಗಿದೆ.

ಮೇಲ್ಕಂಡ ವೆಚ್ಚವನ್ನು 2022-23ನೇ ಸಾಲಿನ ಪ್ರಸಾರಾಂಗದ **"ಆವರ್ತನಾ ನಿಧಿಯಿಂದ"** ಭರಿಸತಕ್ಕದ್ದು.

ಆದೇಶದ ಮೇರೆಗೆ

ಕುಲಸಚಿವ 28/12/2022

ಇವರಿಗೆ:
1. ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು
2. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
3. ಅಪರ ನಿರ್ದೇಶಕರು, ಕರ್ನಾಟಕ ಲೆಕ್ಕಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ ಪ್ರಾಂತೀಯ ಕಛೇರಿ, ಮೈಸೂರು ವಿಭಾಗ, ಮೈಸೂರು
4. ಅಧೀಕ್ಷಕರು(ಸಾಮಾನ್ಯ-1), ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
5. ಕಛೇರಿ ಪ್ರತಿ:-prasaranga draft.

-06
29/12/22
30/12/22

e-mail : prasarangauom@gmail.com
www.uni.ac.mysore
ದೂರವಾಣಿ : 0821-2419387

# ಮೈಸೂರು ವಿಶ್ವವಿದ್ಯಾನಿಲಯ
# UNIVERSITY OF MYSORE

(Re-accredited by NAAC at "A" Grade with a CGPA of 3.01)
(Ranked 34th Overall and 19th among Universities in NIRF ranking 2021)

ಪ್ರಸಾರಾಂಗ
PRASARANGA

ಮಾನಸಗಂಗೋತ್ರಿ, ಮೈಸೂರು ೫೭೦ ೦೦೬
Manasagangotri, Mysore-570 006

ಸಂಖ್ಯೆ ಪ್ರ6/404/2022-23

ದಿನಾಂಕ : 03-01-2023

## ಕಛೇರಿ ಸೂಚಿ

ದಿನಾಂಕ **06-01-2023** ರಿಂದ **08-01-2023** ರವರೆಗೆ ಹಾವೇರಿಯಲ್ಲಿ ನಡೆಯುವ **86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ** ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ ವಿಭಾಗದಿಂದ ಪುಸ್ತಕ ಪ್ರದರ್ಶನ / ಮಾರಾಟ ಮಾಡಲು ಈ ಕೆಳಕಂಡ ಸಿಬ್ಬಂದಿ ವರ್ಗದವರನ್ನು ನಿಯೋಜಿಸಲಾಗಿದೆ.

1. ಡಾ. ಬಿ.ಎಸ್. ಅನಿಲಕುಮಾರ್ – ಸಹಾಯಕ ನಿರ್ದೇಶಕರು (ಮಾರಾಟ ವಿಭಾಗ) (ಮೇಲು ಉಸ್ತುವಾರಿ)
2. ಶ್ರೀ ಎಂ.ಜಿ. ನಟೇಶ್ – ಹಿರಿಯ ಸಹಾಯಕರು
3. ಶ್ರೀ ವಿನೋದ್ – ಡಿ.ಟಿ.ಪಿ. ಆಪರೇಟರ್
4. ಶ್ರೀ ಪ್ರದೀಪ್ ಕೆ. – ದ್ವಿತೀಯ ದರ್ಜೆ ಗುಮಾಸ್ತರು
5. ಕೀರ್ತಿ ಆರ್. – ದ್ವಿತೀಯ ದರ್ಜೆ ಗುಮಾಸ್ತರು
6. ಹರ್ಷಿತ್ ಪಿ. – ದ್ವಿತೀಯ ದರ್ಜೆ ಗುಮಾಸ್ತರು
7. ಶ್ರೀ ರೇವಂತ್ ಸಿ. – ದ್ವಿತೀಯ ದರ್ಜೆ ಗುಮಾಸ್ತರು
8. ಶ್ರೀ ವಿನೋದ್ – ಪರಿಚಾರಕ
9. ನಿರಂಜನ್ – ಪರಿಚಾರಕ
10. ರಾಜು – ತೋಟಗಾರ

ಮೇಲೆ ತಿಳಿಸಿರುವ ಸಿಬ್ಬಂದಿ ವರ್ಗದವರು ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ಕಾರ್ಯ ನಿರ್ವಹಿಸತಕ್ಕದ್ದು.

1. **ಪ್ರಚಾರೋಪನ್ಯಾಸ ಪುಸ್ತಕ, ಪಠ್ಯಪುಸ್ತಕಗಳನ್ನು ಹೊರತುಪಡಿಸಿ ಇಂಗ್ಲಿಷ್-ಕನ್ನಡ ನಿಘಂಟು, ಕನ್ನಡ ವಿಶ್ವಕೋಶ, ವಿಷಯ ವಿಶ್ವಕೋಶಗಳಿಗೆ ಶೇ. 15 ರಿಯಾಯಿತಿ** ನೀಡುವುದು ಹಾಗೂ ಉಳಿದ ಪುಸ್ತಕಗಳಿಗೆ **ಶೇ. 33.33% ರಿಯಾಯಿತಿ** ನೀಡುವುದು ಮತ್ತು ಎಪಿಗ್ರಾಫಿಯಾ ಕರ್ನಾಟಿಕ ಹಾಗೂ ಇನ್ನಿತರ ಉಳಿದ ಪುಸ್ತಕಗಳಿಗೆ ನಿಯಮಾನುಸಾರ ಮಾರಾಟ ಮಾಡಬಹುದಾಗಿರುತ್ತದೆ.
2. ಪ್ರದರ್ಶನದಲ್ಲಿ ನಿಯೋಜಿತರಾದ ಸಿಬ್ಬಂದಿಗಳು ಒಟ್ಟು ವ್ಯಾಪಾರದಲ್ಲಿ ಶೇ. 15 ರಷ್ಟು ಪ್ರೋತ್ಸಾಹ ಧನವನ್ನು ಪಡೆಯಲು ಅರ್ಹರಾಗಿರುತ್ತಾರೆ. ಮಾರಾಟದಿಂದ ಬಂದ ಮೊಬಲಗನ್ನು ಪ್ರದರ್ಶನ ಮುಗಿದ ಕೂಡಲೇ ಕಛೇರಿಗೆ ಜಮಾ ಮಾಡಿ, ಲೆಕ್ಕ ಹೊಂದಾಣಿಕೆಯಾದ ನಂತರವೇ ಪ್ರೋತ್ಸಾಹ ಧನವನ್ನು ಪಡೆಯತಕ್ಕದ್ದು.
3. ದಿನಾಂಕ **06-01-2023** ರಿಂದ ದಿನಾಂಕ **08-01-2023 ರವರೆಗೆ** ನಡೆಯಲಿರುವ ರಿಯಾಯಿತಿ ಮಾರಾಟ ಮಾಡಲು ನಿಯೋಜಿಸಿರುವ ಸಿಬ್ಬಂದಿಗಳ ಕಛೇರಿ ಗೈರುಹಾಜರಿಯನ್ನು ದಿನಾಂಕ **04-01-2023** ರಿಂದ **10-01-2023** ರವರೆಗೆ ಅನ್ಯಕಾರ್ಯನಿಮಿತ್ತವೆಂದು ಪರಿಗಣಿಸುವುದು. ಹಾಗೂ ಸರ್ಕಾರಿ ರಜೆ ದಿನದಂದು ನಿರ್ವಹಿಸುವ ಕೆಲಸಕ್ಕೆ ಪರಿಹಾರ ರಜೆಯನ್ನು ಪಡೆಯಲು ಅನುಮತಿ ನೀಡಲಾಗಿದೆ.
4. ಪ್ರದರ್ಶನ ಪ್ರಾರಂಭಗೊಂಡು ಮುಗಿಯುವವರೆಗೆ ಎಲ್ಲಾ ಸಿಬ್ಬಂದಿಗಳು ಸರಿಯಾದ ಸಮಯಕ್ಕೆ ಹಾಜರಾಗಿ ಸಮನಾಗಿ ಕೆಲಸವನ್ನು ಜವಾಬ್ದಾರಿಯಿಂದ ನಿರ್ವಹಿಸಲು ಸೂಚಿಸಲಾಗಿದೆ.

ಪ್ರ-೦6 4/1/23

ಎಂ. ನಂಜೇಗೌಡ 03/1/23
ನಿರ್ದೇಶಕರು

3-1-23

3/1/2023

ಪ್ರತಿ :

1. ನಿಯೋಜಿತ ಸಿಬ್ಬಂದಿಗಳಿಗೆ.
2. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಕಛೇರಿ ಪ್ರತಿ.


ಮೈಸೂರು ವಿಶ್ವವಿದ್ಯಾನಿಲಯ
ಪ್ರಸಾರಾಂಗ
ಮಾನಸಗಂಗೋತ್ರಿ, ಮೈಸೂರು
ವಿಶೇಷ ರಿಯಾಯಿತಿ ಮಾರಾಟ
• ಸಾಮಾನ್ಯ ಪುಸ್ತಕಗಳು ಶೇ.33.33%
ಪ್ರಸಾರಾಂಗ
ENGLISH-KANNADA DICTIONARY